[C.R.P.] ಕರ್ನಾಟಕ ಸರ್ಕಾರ

Form No. 4
(Criminal)
Deposition Sheets
(R.P. No. 57)

# ಅಪರ ಜಿಲ್ಲಾ ಹಾಗೂ ಸತ್ರ ನ್ಯಾಯಾಲಯ, ಗದಗ

**ಸ್ಪೇಷಲ್ ಕೇಸ್ ಎಸ್ ಸಿ/ಎಸ್ ಟಿ ನಂ.20/2023.**
**ಸಿಡಬ್ಲ್ಯೂಃ25/ಪಿಡಬ್ಲ್ಯೂಃ14**
**ದಿನಾಂಕಃ 14.08.2024**

| | | |
|---|---|---|
| ಸಾಕ್ಷಿದಾರನ/ಳ ಹೆಸರು | – | ಡಾಃ ಬಸವರಾಜ ಕೋಟಿ |
| ತಂದೆಯ / ಗಂಡನ ಹೆಸರು | – | ಅಶೋಕ |
| ವಯಸ್ಸು | – | 40 ವರ್ಷ |
| ಉದ್ಯೋಗ | – | ಸೀನಿಯರ್ ಸೈಂಟಿಫಿಕ್ ಆಫೀಸರ, ರಸಾಯನಿಕ ಪ್ರಾದೇಶಿಕ ಪ್ರಯೋಗಾಲಯ ಬೆಳಗಾವಿ |
| ವಾಸಸ್ಥಳ | – | ಬೆಳಗಾವಿ |

**ಬೆಳಗಾವಿಯ RFSL ಕಛೇರಿಯಲ್ಲಿ ಇರುವ ವಿಡಿಯೊ ಕಾನ್ಫರೆನ್ಸ್ ಕೊಠಡಿಯಲ್ಲಿ ಸಾಕ್ಷಿ ಹಾಜರಿದ್ದಾರೆ. ಶ್ರೀ. ಪ್ರವೀಣ ಲಾತೂರ ಇಇಜಿ ಟೆಕ್ನಿಶಿಯನ್ ರವರನ್ನು ರಿಮೋಟ್ ಪಾಯಿಂಟ್ ಕೋ-ಆರ್ಡಿನೇಟರ್ ಎಂದು ನೇಮಿಸಲಾಯಿತು.**

**ವಿಡಿಯೋ ಕಾನ್ವರನ್ಸ ಮೂಲಕ ಸಾಕ್ಷಿಯನ್ನು ದಾಖಲು ಮಾಡಿಕೊಳ್ಳಲಾಗುತ್ತಿದೆ, ವಿಡಿಯೋ ಸಂಪರ್ಕವನ್ನು ಗೂಗಲ್ ಮಿಟ್ http://meet.google.com/fkq-aksv-ozt ಮೂಲಕ ವೀಡಿಯೊ ಸಂಪರ್ಕವನ್ನು ಕಲ್ಪಿಸಿಕೊಳ್ಳಲಾಗಿದೆ. ನೆಟ್‌ವರ್ಕ್‌ನಲ್ಲಿ ಯಾವುದೇ ತೊಂದರೆ ಇಲ್ಲ, ಆರೋಪಿ ಮತ್ತು ಆರೋಪಿ ಪರ ವಕೀಲರು ನ್ಯಾಯಾಲಯದಲ್ಲಿ ಹಾಜರು ಇರುತ್ತಾರೆ. ಆಡಿಯೋ ಮತ್ತು ವಿಡಿಯೋ ಸ್ಪಷ್ಟವಾಗಿದೆ. ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಿದರು.**

**ಆರೋಪಿತನು ನ್ಯಾಯಾಂಗ ಬಂಧನದಲ್ಲಿ ಇದ್ದು, ಇಂದು ಸಾಕ್ಷಿ ನಡೆಯುವ ಸಂದರ್ಭದಲ್ಲಿ**

**ಆತನ ಉಪಸ್ಥಿತಿಯನ್ನು ವಿಡಿಯೋ ಕಾನ್ವೆರೆನ್ಸ ಮೂಲಕ ಮಾಡಲಾಗಿರುತ್ತದೆ. ನ್ಯಾಯಾಲಯದಿಂದ ಶಬ್ದವು ಕೇಳಿಸುತ್ತಿದೆ ಎಂಬುದನ್ನು ಆರೋಪಿಯ ಕಡೆಯಿಂದ ಖಚಿತಪಡಿಸಿಕೊಳ್ಳಲಾಗಿರುತ್ತದೆ.**

## ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ

1. ನಾನು ಜನವರಿ 2023 ರಿಂದ ಬೆಳಗಾವಿಯ ಪ್ರಾದೇಶಿಕ ಪ್ರಯೋಗಾಲಯದಲ್ಲಿ ಹಿರಿಯ ರಸಾಯನಿಕ ಪರೀಕ್ಷಕರು ಎಂದು ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿಃ29.03.2023 ರಂದು ಮುಂಡರಗಿ ಪೊಲೀಸ ಠಾಣೆಯ ಮೊಕದ್ದಮೆ ಸಂಖ್ಯೆ ಗುನ್ನಾ ನಂ.40/2023ರ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಳ್ಳಲಾಗಿದ್ದ 5 ವಸ್ತುಗಳನ್ನು ಕೆ ಐ ಮುತ್ತಾಳಮಠ ಪಿಸಿ ಇವರು ಪರೀಕ್ಷೆಗಾಗಿ ಬೆಳಗಾವಿಯ RFSL ಕಚೇರಿಯ ಸ್ವಾಗತ ವಿಭಾಗಕ್ಕೆ ಸಲ್ಲಿಸಿದ್ದರು. ದಿಃ31.03.2023 ರಂದು ಆ ವಸ್ತುಗಳನ್ನು ಪರೀಕ್ಷೆಗಾಗಿ ನನಗೆ ಕಳಿಸಿಕೊಟ್ಟಿದ್ದರು. ಪ್ಯಾಕೇಟ್ ಮೇಲೆ ಇದ್ದ ಸೀಲು, ಕಳುಹಿಸಿಕೊಟ್ಟಿದ್ದ ಸೀಲಿನ ಮಾದರಿಯೊಂದಿಗೆ ತಾಳೆಯಾಗುತ್ತಿತ್ತು ಹಾಗೂ ಸುಸ್ಥಿತಿಯಲ್ಲಿತ್ತು. ಅವುಗಳ ಮೇಲೆ ಟಿ ಎಲ್ ಎಚ್ ಎಂ ಟಿ ಆರ್ ಎಂದು ಸೀಲ್ ಇತ್ತು. ಆ 5 ವಸ್ತುಗಳನ್ನು ತೆರೆದು ನೋಡಲಾಗಿ ಅವುಗಳಲ್ಲಿ ಈ ಕೆಳಕಂಡ ವಸ್ತುಗಳು ಇದ್ದವು.

1. veil
2. one top
3. one bottom
4. one nikker
5. nail clippings

3. ನಾನು ಮೇಲ್ಕಂಡ 5 ವಸ್ತುಗಳಲ್ಲಿ ರಕ್ತದ ಕಲೆಗಳು ಹಾಗೂ ಚರ್ಮದ ಅಂತ ಇದೆಯೋ ಹೇಗೊ ಎನ್ನುವ ಬಗ್ಗೆ ಪರೀಕ್ಷೆ ಮಾಡಿ ಫಲಿತಾಂಶವನ್ನು ನನ್ನ ವರದಿಯಲ್ಲಿ

ನೀಡಿರುತ್ತೇನೆ. ಈಗ ನನಗೆ ತೋರಿಸಿದ ವರದಿ ಅದೇ ಆಗಿರುತ್ತದೆ. ವರದಿಯನ್ನು ನಿಪಿಃ 28 ಎಂದು ಗುರುತಿಸಲಾಯಿತು. ನಿಪಿಃ 28 ವರದಿಗೆ ನಾನು ನನ್ನ ಡಿಜಿಟಲ್ ಸಹಿ ಮಾಡಿರುತ್ತೇನೆ. ಈಗ ಕಾಣುತ್ತಿರುವ signature valid ನನ್ನದೇ ಡಿಜಿಟಲ್ ಸಹಿ ಆಗಿರುತ್ತದೆ. ಸಾಕ್ಷಿದಾರರು ಗುರುತಿಸಿದ ಆ ಸಹಿಯನ್ನು ನಿಪಿಃ 28(ಎ) ಎಂದು ಗುರುತಿಸಲಾಯಿತು.

4. ನನ್ನ ಅಭಿಪ್ರಾಯದಲ್ಲಿ ಕ್ರಮಸಂಖ್ಯೆ 3 ಹಾಗೂ 4 ರಲ್ಲಿ ರಕ್ತದ ಕಲೆಗಳು ಕಂಡುಬಂದಿರುತ್ತವೆ. ಕ್ರಮಸಂಖ್ಯೆ 3 ಹಾಗೂ 4 ರಲ್ಲಿ ಇದ್ದ ರಕ್ತದ ಕಲೆಗಳು ಮನುಷ್ಯನ ರಕ್ತದ ಕಲೆಗಳಾಗಿರುತ್ತವೆ. ಆ ರಕ್ತದ ಕಲೆಗಳು ಗುಂಪು ನಿರ್ಧರಿಸಲು ಪ್ರತಿಕ್ರಿಯೆ ನೀಡದೆ ಇದ್ದ ಕಾರಣ ರಕ್ತದ ಗುಂಪನ್ನು ನಿರ್ಧರಿಸಲು ಸಾಧ್ಯವಾಗಿಲ್ಲ. ಕ್ರಮಸಂಖ್ಯೆ 1 ಹಾಗೂ 2 ರಲ್ಲಿ ಕಲೆಗಳು ಕಂಡುಬಂದಿರುವುದಿಲ್ಲ. ಕ್ರಮಸಂಖ್ಯೆ 5 (article No.9) ರಲ್ಲಿಚರ್ಮದ ಜೀವಕೋಶಗಳು ಕಂಡುಬಂದಿರುವುದಿಲ್ಲ.

5. ಪರೀಕ್ಷೆ ಮಾಡಿದ ನಂತರ ಮೇಲ್ಕಂಡ ವಸ್ತುಗಳನ್ನು ಪುನಃ ಪ್ಯಾಕ ಮಾಡಿ ಸೀಲ್ ಮಾಡಿ RFSL ಮೊಹರು ಹಾಕಿ ಸಂಬಂಧಿಸಿದ ಪೊಲೀಸರಿಗೆ ವಾಪಸ್ ಕಳಿಸಿಕೊಟ್ಟಿರುತ್ತೇನೆ. ಈಗ ನನಗೆ ತೋರಿಸಿದ ಪ್ಯಾಕ ಅವೇ ಆಗಿರುತ್ತವೆ. ಅವುಗಳ ಮೇಲೆ ಎಫ್ ಎಸ್ ಎಲ್ ಮೊಹರು ಹಾಗೂ ನನ್ನ ಸಹಿಗಳು ಇವೆ. ಅವುಗಳನ್ನು ಮು ಮಾ 1 ರಿಂದ 5 ಎಂದು ಗುರುತಿಸಲಾಗಿದೆ. ಸಾಕ್ಷಿದಾರರು ಗುರುತಿಸಿದ ಅವರ ಸಹಿ ಮತ್ತು ಎಫ್ ಎಸ್ ಎಲ್ ಮೊಹರನ್ನು ಮು ಮಾ 1(ಬಿ), 2 (ಎ) ರಿಂದ 5(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ. ವಿ ವಿ ಪಾಟೀಲ ಆರೋಪಿ ಪರ ವಕೀಲರಿಂದ**

6. ಕ್ರಮಸಂಖ್ಯೆ4 ರ ನಿಕ್ಕರ ಯಾವ ಬಣ್ಣದ್ದು ಇತ್ತು ಎಂದರೆ ನೀಲಿ ಬಣ್ಣದ್ದು. ಕ್ರಮಸಂಖ್ಯೆ 3 ಹಾಗೂ 4 ರ ವಸ್ತುಗಳ ಯಾವ ಯಾವ ಭಾಗಗಳಲ್ಲಿ ರಕ್ತದ ಕಲೆಗಳು ಕಂಡುಬಂದವು

ಎಂದು ನಿಪಿಃ 28 ವರದಿಯಲ್ಲಿ ನಮೂದ ಮಾಡಿಲ್ಲ ಎಂದರೆ ನಿಜ. ಪೊಲೀಸರ ಮಾತು ಕೇಳಿ ಪರೀಕ್ಷೆ ಮಾಡಿದ ಕ್ರಮಸಂಖ್ಯೆ3 ಹಾಗೂ 4 ರಲ್ಲಿ ರಕ್ತದ ಕಲೆಗಳು ಕಂಡುಬಂದಿದ್ದವು ಎಂದು ಸುಳ್ಳು ವರದಿ ನೀಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೆ ಸರಿ ಇದೆ.

ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,ಗದಗ.

**ರಿಮೋಟ್ ಪಾಯಿಂಟ್ ಕೋ–ಆರ್ಡಿನೇಟರ್ ರವರ ಸಹಿಃ**

[C.R.P.] ಕರ್ನಾಟಕ ಸರ್ಕಾರ

| Form No. 4 (Criminal) Deposition Sheets (R.P. No. 57) |
|---|

# ಅಪರ ಜಿಲ್ಲಾ ಹಾಗೂ ಸತ್ರ ನ್ಯಾಯಾಲಯ, ಗದಗ

**ಸ್ಪೇಷಲ್ ಕೇಸ್ ಎಸ್ ಸಿ/ಎಸ್ ಟಿ ನಂ.20/2023.**

**ಸಿಡಬ್ಲ್ಯೂ:26/ಪಿಡಬ್ಲ್ಯೂ:13**

**ದಿನಾಂಕಃ 14.08.2024**

ಸಾಕ್ಷಿದಾರನ/ಳ ಹೆಸರು – ಸುಭಾಷ ಬೊಮ್ಮನಹಳ್ಳಿ

ತಂದೆಯ / ಗಂಡನ ಹೆಸರು – ಯಲ್ಲಪ್ಪ

ವಯಸ್ಸು – 41 ವರ್ಷ

ಉದ್ಯೋಗ – ಸೀನಿಯರ್ ಸೈಂಟಿಫಿಕ್ ಆಫೀಸರ ರಸಾಯನಿಕ ಪ್ರಾದೇಶಿಕ ಪ್ರಯೋಗಾಲಯ ಬೆಳಗಾವಿ

ವಾಸಸ್ಥಳ – ಬೆಳಗಾವಿ

**ಬೆಳಗಾವಿಯ RFSL ಕಛೇರಿಯಲ್ಲಿ ಇರುವ ವಿಡಿಯೊ ಕಾನ್ಫರೆನ್ಸ್ ಕೊಠಡಿಯಲ್ಲಿ ಸಾಕ್ಷಿ ಹಾಜರಿದ್ದಾರೆ. ಶ್ರೀ. ಪ್ರವೀಣ ಲಾತೂರ ಇಇಜಿ ಟೆಕ್ನಿಶಿಯನ್ ರವರನ್ನು ರಿಮೋಟ್ ಪಾಯಿಂಟ್ ಕೋ-ಆರ್ಡಿನೇಟರ್ ಎಂದು ನೇಮಿಸಲಾಯಿತು.**

**ವಿಡಿಯೋ ಕಾನ್ವರನ್ಸ ಮೂಲಕ ಸಾಕ್ಷಿಯನ್ನು ದಾಖಲು ಮಾಡಿಕೊಳ್ಳಲಾಗುತ್ತಿದೆ, ವಿಡಿಯೋ ಸಂಪರ್ಕವನ್ನು ಗೂಗಲ್ ಮಿಟ್ http://meet.google.com/fkq-aksv-ozt ಮೂಲಕ ವೀಡಿಯೊ ಸಂಪರ್ಕವನ್ನು ಕಲ್ಪಿಸಿಕೊಳ್ಳಲಾಗಿದೆ. ನೆಟ್‌ವರ್ಕ್‌ನಲ್ಲಿ ಯಾವುದೇ ತೊಂದರೆ ಇಲ್ಲ, ಆರೋಪಿ ಮತ್ತು ಆರೋಪಿ ಪರ ವಕೀಲರು ನ್ಯಾಯಾಲಯದಲ್ಲಿ ಹಾಜರು ಇರುತ್ತಾರೆ. ಆಡಿಯೋ ಮತ್ತು ವಿಡಿಯೋ ಸ್ಪಷ್ಟವಾಗಿದೆ. ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಿದರು.**

**ಆರೋಪಿತನು ನ್ಯಾಯಾಂಗ ಬಂಧನದಲ್ಲಿ ಇದ್ದು, ಇಂದು ಸಾಕ್ಷಿ ನಡೆಯುವ ಸಂದರ್ಭದಲ್ಲಿ**

**ಆತನ ಉಪಸ್ಥಿತಿಯನ್ನು ವಿಡಿಯೋ ಕಾನ್ಫರೆನ್ಸ ಮೂಲಕ ಮಾಡಲಾಗಿರುತ್ತದೆ. ನ್ಯಾಯಾಲಯದಿಂದ ಶಬ್ದವು ಕೇಳಿಸುತ್ತಿದೆ ಎಂಬುದನ್ನು ಆರೋಪಿಯ ಕಡೆಯಿಂದ ಖಚಿತಪಡಿಸಿಕೊಳ್ಳಲಾಗಿರುತ್ತದೆ.**

## ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ

1. ನಾನು 2019 ರಿಂದ ಬೆಳಗಾವಿಯ ಪ್ರಾದೇಶಿಕ ಪ್ರಯೋಗಾಲಯದಲ್ಲಿ ಹಿರಿಯ ರಸಾಯನಿಕ ಪರೀಕ್ಷಕರು ಎಂದು ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿಃ29.03.2023 ರಂದು ಮುಂಡರಗಿ ಪೊಲೀಸ ಠಾಣೆಯ ಮೊಕದ್ದಮೆ ಸಂಖ್ಯೆ ಗುನ್ನಾ ನಂ.40/2023ರ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಳ್ಳಲಾಗಿದ್ದ ನಾಲ್ಕು ವಸ್ತುಗಳನ್ನು ಕೆ ಐ ಮುತ್ತಾಳಮಠ ಪಿಸಿ ಇವರು ಪರೀಕ್ಷೆಗಾಗಿ ಬೆಳಗಾವಿಯ RFSL ಕಚೇರಿಯ ಸ್ವಾಗತ ವಿಭಾಗಕ್ಕೆ ಸಲ್ಲಿಸಿದ್ದರು. ಅದೇ ದಿನ ಆ ವಸ್ತುಗಳನ್ನು ಪರೀಕ್ಷೆಗಾಗಿ ನನಗೆ ಕಳಿಸಿಕೊಟ್ಟಿದ್ದರು. ಪ್ಯಾಕೇಟ್ ಮೇಲೆ ಇದ್ದ ಸೀಲು, ಕಳುಹಿಸಿಕೊಟ್ಟಿದ್ದ ಸೀಲಿನ ಮಾದರಿಯೊಂದಿಗೆ ತಾಳೆಯಾಗುತ್ತಿತ್ತು ಹಾಗೂ ಸುಸ್ಥಿತಿಯಲ್ಲಿತ್ತು. ಅವುಗಳ ಮೇಲೆ ಟಿ ಎಲ್ ಎಚ್ ಎಂ ಟಿ ಆರ್ ಎಂದು ಸೀಲ್ ಇತ್ತು. ಆ ನಾಲ್ಕು ವಸ್ತುಗಳನ್ನು ತೆರೆದು ನೋಡಲಾಗಿ ಅವುಗಳಲ್ಲಿ ಈ ಕೆಳಕಂಡ ವಸ್ತುಗಳು ಇದ್ದವು.

1. stomach with its contents, segments of small intestine.
2. parts of lungs, heart, kidney, liver and spleen
3. preservative saturated sodium chloride solution.
4. Blood

3. ನಾನು ಮೇಲ್ಕಂಡ ನಾಲ್ಕು ವಸ್ತುಗಳಲ್ಲಿ ethyl alcohol, pesticides, drugs, alkaloids, toxic metal ions, anions ಇದೆಯೋ ಹೇಗೊ ಎನ್ನುವ ಬಗ್ಗೆ ಪರೀಕ್ಷೆ ಮಾಡಿ ನನ್ನ ವರದಿ ನೀಡಿರುತ್ತೇನೆ. ಈಗ ನನಗೆ ತೋರಿಸಿದ ನಿಪಿಃ27 ವರದಿ ಅದೇ

ಆಗಿರುತ್ತದೆ. ನಿಪಿಃ 27 ವರದಿಗೆ ನಾನು ನನ್ನ ಡಿಜಿಟಲ್ ಸಹಿ ಮಾಡಿರುತ್ತೇನೆ. ಈಗ ಕಾಣುತ್ತಿರುವ signature valid ನನ್ನದೇ ಡಿಜಿಟಲ್ ಸಹಿ ಆಗಿರುತ್ತದೆ. ಸಾಕ್ಷಿದಾರರು ಗುರುತಿಸಿದ ಆ ಸಹಿಯನ್ನು ನಿಪಿಃ 27(ಬಿ) ಎಂದು ಗುರುತಿಸಲಾಯಿತು.

4. ನನ್ನ ಅಭಿಪ್ರಾಯದಲ್ಲಿ ನಾನು ಪರೀಕ್ಷೆ ಮಾಡಿರುವ ಕ್ರಮಸಂಖ್ಯೆ1,2,4 ನೇ ವಸ್ತುಗಳಲ್ಲಿ residues of volatile poisons including ethyl alcohol, pesticides, drugs, alkaloids, toxic metal ions, anions ಕಂಡುಬಂದಿರುವುದಿಲ್ಲ. ಪರೀಕ್ಷೆ ಮಾಡಿದ ನಂತರ ಉಳಿದ ಭಾಗಗಳನ್ನು ನಾಶಪಡಿಸಲಾಯಿತು.

**<u>ಪಾಟೀ ಸವಾಲುಃ ಶ್ರೀ. ವಿ ವಿ ಪಾಟೀಲ ಆರೋಪಿ ಪರ ವಕೀಲರಿಂದ</u>**

5. ಪರೀಕ್ಷೆಗೆ ಕಳಿಸಿದ ನಾಲ್ಕು ವಸ್ತುಗಳ ಜೊತೆ ಪೊಲೀಸರು ಮನವಿಯನ್ನೂ ಕಳಿಸಿಕೊಟ್ಟಿದ್ದರೆ ಎಂದರೆ ಹೌದು. ಆ ರೀತಿ ಯಾವುದೇ ಮನವಿಯನ್ನು ಕಳಿಸಿಕೊಡದೆ ಇದ್ದರೂ ಸಹ ಕೊಟ್ಟಿದ್ದಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೆ ಸರಿ ಇದೆ.

ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಗದಗ.

**<u>ರಿಮೋಟ್ ಪಾಯಿಂಟ್ ಕೋ-ಆರ್ಡಿನೇಟರ್ ರವರ ಸಹಿಃ</u>**